ಎಕ್ಸಿಕ್ಯೂಷನ್ ನಂಃ 35/2021
ಪಿಡಬ್ಲ್ಯೂಃ 1
ದಿನಾಂಕಃ 30.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್ ವಿ ವಕೀಲರಿಂದಃ</u>

ಚಿನ್ನಮ್ಮಾಳ್ ನನ್ನ ಅಜ್ಜಿ. ಅವರು ನನ್ನ ತಾಯಿಯ ತಾಯಿ. ಪುಷ್ಪರಾಜ್ ನನ್ನ ತಂದೆ. ದಾವಾ ಸ್ವತ್ತು ನನ್ನ ಅಜ್ಜಿಗೆ ಮಂಜೂರಾದ ನಂತರ ಸದರಿ ಸ್ವತ್ತನ್ನು ಪೋಡಿ ಮಾಡಲಾಗಿದೆಯಾ ಅಂದರೆ ಇಲ್ಲ ಎನ್ನುತ್ತಾರೆ. ಸದರಿ ಸ್ವತ್ತಿನ ಚೆಕ್ಕು ಬಂದಿಯನ್ನು ಸರ್ಕಾರದವರು ಗುರುತಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರ ಗಣೇಶಪ್ಪನಿಗೆ ಮಂಜೂರಾದ ಜಮೀನನ್ನು ನಾವು ನೋಡಿರುತ್ತೇವೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಾನು ಎಲ್ಲಿ ವಾಸ ಎಂದರೆ ಕೆಜಿಎಫ್ ನಲ್ಲಿ ಎನ್ನುತ್ತಾರೆ. ದಾವಾದಲ್ಲಿ ಆದಂತಹ ತೀರ್ಪಿನ ಉಲ್ಲಂಘನೆಯನ್ನು ಯಾವ ದಿನ ಎದುರುದಾರರು ಮಾಡಿರುತ್ತಾರೆ ಎಂದು ಹೇಳಲು ಸಾಧ್ಯವೇ ಅಂದರೆ ದಿನಾಂಕ 20.04.2021 ರಲ್ಲಿ ಎನ್ನುತ್ತಾರೆ. ಅದು ಯಾವ ರೀತಿ ಗಲಾಟೆ ಮಾಡಿರುತ್ತಾರೆ ಎಂದರೆ ದಾವಾ ಸ್ವತ್ತಿನ ಬರಬೇಡಿ ಅದು ನಮ್ಮದು ಎಂದು ಪ್ರತಿಪಾದಿಸಿರುತ್ತಾರೆ ಎನ್ನುತ್ತಾರೆ. ಆ ರೀತಿ ಎದುರುದಾರರು ಗಲಾಟೆ ಮಾಡಿದ್ದನ್ನು ಯಾರಾದರೂ ನೋಡಿರುತ್ತಾರೆಯೇ ಅಂದರೆ ಅಲ್ಲಿದ್ದ ಊರಿನವರು ನೋಡಿರುತ್ತಾರೆ ಎನ್ನುತ್ತಾರೆ. ಅವರ ಹೆಸರು ಹೇಳಲು ಸಾಧ್ಯವೇ ಅಂದರೆ ಎಲ್ಲರ ಹೆಸರು ಹೇಳಲು ಸಾಧ್ಯವಿಲ್ಲ ನಮಗೆ ಗೊತ್ತಿದ್ದ ಬಾಲಕೃಷ್ಣ ಎನ್ನುವವರು ನೋಡಿರುತ್ತಾರೆ .ಅವರು ಯಾವ ಊರಿನವರು ಜಯಮಂಗಲದವರು ಎನ್ನುತ್ತಾರೆ.

ದಾವಾ ಸ್ವತ್ತು ಈಗ ಯಾರ ಸ್ವಾಧೀನದಲ್ಲಿ ಇದೆ ಎಂದರೆ ನಮ್ಮ ಸ್ವಾಧೀನದಲ್ಲಿ ಇದೆ ಎನ್ನುತ್ತಾರೆ. ನಮ್ಮ ದಾವಾ ಸ್ವತ್ತಿನ ಸರ್ವೆ ನಂಬರ್ 130/ಪಿ8 ಇದ್ದು ಸರ್ವೆ ನಂಬರ್ 130 ಪಿ17 ಗೆ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸರ್ವೆ ನಂಬರ್ 130 ಪಿ 17 ನ ಹೊಸ ನಂಬರ್ 189 ಆಗಿದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಎದುರುದಾರರು ತಮ್ಮ ಸರ್ವೆ ನಂಬರ್ 130/ಪಿ17 ಹೊಸ ನಂಬರ್ 189 ರಲ್ಲಿ ಸ್ವಾಧೀನದಲ್ಲಿ ಇದ್ದು ಅದಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಾವು ಹೇಳಿದಂತೆ ತೀರ್ಪಿನ ಉಲ್ಲಂಘನೆ ಆಗಿರುವುದು ಈ ಪ್ರಕರಣದಲ್ಲಿ ಎಲ್ಲೂ ಕಂಡು ಬಂದಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರ ಶ್ರೀನಿವಾಸ್ ಸರ್ವೆ ನಂಬರ್ 189 ರ ಸಂಬಂಧ ನಮ್ಮ ವಿರುದ್ದ ಒ ಎಸ್ ನಂಬರ್ 190/2022 ನ್ನು ಹೂಡಿರುತ್ತಾರೆ ಎಂದರೆ ಸರಿ . ಅದೇ ರೀತಿ 3 ನೇ ಎದುರುದಾರ ಸುಬ್ರಮಣಿ ಸರ್ವೆ ನಂಬರ್ 189 ರ ಸಂಬಂಧ ನಮ್ಮ ವಿರುದ್ದ ಒ

ಎಕ್ಸಿಕ್ಯೂಷನ್ ನಂಃ 35/2021

ಎಸ್ ನಂಬರ್ 193/2022 ನ್ನು ಹೂಡಿರುತ್ತಾರೆ ಎಂದರೆ ಸರಿ. ಎದುರುದಾರರು ತೀರ್ಪಿನ ಉಲ್ಲಂಘನೆ ಮಾಡದೇ ಇದ್ದರೂ ಕೂಡ ಅವರ ವಿರುದ್ಧ ಅವರಿಗೆ ತೊಂದರೆ ಕೊಡಲು ಈ ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್